ಆಗಿದ್ದರು. ಯಾಕೆಂದರೆ ಅವರು ಮಚಗೇರ ಜಾತಿಯವರಾಗಿದ್ದು ಚಪ್ಪಲಿ ಹೊಲೆಯುವುದು, ಮಾರುವುದು ಅವರ ಕುಲಕಸುಬಾಗಿತ್ತು. ಮತ್ತೆ ಬೇರೆ ಯಾರೂ ಆ ಕಸುಬನ್ನು ಮಾಡುತ್ತಿರಲಿಲ್ಲ. ಇದರಿಂದ ಪ್ರತಿಯೊಬ್ಬರ ಬದುಕು ಒಂದು ತೆರನಾದ ಸೇಫ್ ಝೋನ್‌ನಲ್ಲಿತ್ತು ಎಂದು ಹೇಳಬಹುದು. ತಿರುತಿರುಗಿ ಅವರದೇ ಅಂಗಡಿಯನ್ನು ಹಾಗೂ ಚಪ್ಪಲಿಯ ಪ್ಯಾಟರ್ನ್‌ಗಳನ್ನು ಬಿಟ್ಟರೆ ನಮಗೆ ಈಗಿನವರಂತೆ ಹೆಚ್ಚು ಆಯ್ಕೆಗಳೇ ಇರಲಿಲ್ಲ. ಈಗಿನವರಿಗಾದರೆ, ಹವಾಯಿ, ವಿಕೆಸಿ ಪ್ರಾಯಿಡ್, ವಾಕ್‌ಮೇಟ್, ಅದಿದಾಸ್, ಬಾಟಾ, ಖಾದೀಮ್, ನಿವಿಯಾ, ಮೋಚಿ... ಒಂದೋ ಎರಡೋ ಆಯ್ಕೆಗೆ ತಲೆಚಿಟ್ಟು ಹಿಡಿಯುವುದೊಂದೇ ಬಾಕಿ. ಇದು ಖರೀದಿಯ ಒಂದು ಆಯ್ಕೆಯಾದರೆ, ಇನ್ನೊಂದು ಆನ್‌ಲೈನ್ ಖರೀದಿಯ ಹುಚ್ಚು. ಅದು ಯುವಕರನ್ನು, ಮಹಿಳೆಯರನ್ನು ಮಕ್ಕಳನ್ನು ಅದೆಷ್ಟು ವಿಕಲಾಂಗರನ್ನಾಗಿಸಿದೆ ಎಂದರೆ, ಪ್ಯಾಟೆಗೆ ಹೋಗಿ ಚೌಕಾಶಿ ಮಾಡಿ ಒಂದು ಬಿಟ್ಟು ಹತ್ತಾರು ಅಂಗಡಿ ಸುತ್ತುವ, ಮಾತಿಗೆ ಮಾತು ಬೆರಸುವ, ನೋವು ನಲಿವುಗಳ ಕೊಡಕೊಳ್ಳುವಿಕೆಯ ಆ ಮಧುರ ಅನುಭವವನ್ನೇ ಕಸಿದಿದೆ. ಹಾಗಲ್ಲದೇ 'ಇಂದಿನ ಮಂದಿಗೆ ವ್ಯವಹಾರ ಜ್ಞಾನಾನ ಕಡಿಮಿ' ಎಂಬ ಮಾತೊಂದನ್ನು ಹಿರಿಯರು ಇಂದಿನವರನ್ನು ನೋಡಿ ಹೇಳುತ್ತಿರಲಿಲ್ಲ ಅಲ್ಲವೇ? ಇದರ ಕೆಟ್ಟ ಪರಿಣಾಮ ಯಾರ ಮೇಲಾಗುತ್ತಿದೆ ಎಂದು ನೋಡಿದರೆ, ಕುಲಕಸುಬೆಂದು ನಂಬಿ ಬದುಕು ಸಾಗಿಸುತ್ತಿದ್ದವರ ಜೀವನವೀಗ ಈ ಬಂಡವಾಳ ಹೂಡಿಕೆದಾರರ ಶೋರೂಮ್ ಮುಂದೆ ಬೀದಿಪಾಲು. ಅದಕ್ಕೆ ಮೊನ್ನೆ ಸಿಕ್ಕಾಗ ರೇಣುಕಾ ಹೇಳುತ್ತಿದ್ದಳು... 'ಅಪ್ಪ ಸತ್ತ ಮೇಲೆ ಅಂಗಡಿ ತೆಗೆದೆವಿ. ಈಗ ಅಣ್ಣ ಮಾಲ್ ಒಳಗ ಕೆಲಸಕ್ಕಂತ ದಿನಾ ಹುಬ್ಬಳ್ಳಿಗೆ ಅಡ್ಡಾಡತಾನ'.

ಬೇಂದ್ರೆಯವರು ಚಪ್ಪಲಿ ಹೊಲಿಸುವವನ ಹತ್ತಿರ ಚಪ್ಪಲಿ ಹೊಲಿಯಲು ಕೊಟ್ಟು, ಆ ವ್ಯಕ್ತಿಗೆ ಬಿಸಿಲು ಹತ್ತಬಾರದೆಂದು ತಮ್ಮ ಛತ್ರಿ ಹಿಡಿದು ನೆರಳಾದರೆಂದು ಓದಿದ ಆ ಪುಟ್ಟ ಘಟನೆ ಮೇಲಿಂದ ಮೇಲೆ ಯಾಕೋ ನೆನಪಾಗುತ್ತದೆ.

ಒಂಟಿ ಚಪ್ಪಲಿಯನ್ನು ಮೆಟ್ಟಿದ್ದುಂಟೇ ಯಾರಾದರೂ? ಯಾವುದಾದರೂ ಕಾರ್ಯಕಟ್ಟಣಕ್ಕೆಂದು ಹೋದಾಗ ಯಾರದೋ ಅಚಾತುರ್ಯದಿಂದಲೊ, ಗಡಿಬಿಡಿಯಲ್ಲೊ ಚಪ್ಪಲಿ ಅದಲುಬದಲಾದರೆ, ಅನಿವಾರ್ಯ ತೊಟ್ಟುಕೊಂಡು ಬಂದದ್ದಿದೆ. ಒಮ್ಮೊಮ್ಮೆ ಒಂದೇ ಚಪ್ಪಲಿ ಇದ್ದು ಅದರ ಸಂಗಾತಿ ಕಾಣದಿದ್ದಾಗ ಆ ಒಂದನ್ನು ತಂದವರುಂಟೆ?

ಇನ್ನು ದೊಡ್ಡ ನಗರಗಳಲ್ಲಿ ಒಂದಿಷ್ಟು ಕಂಪನಿಗಳಿವೆ. ಅವುಗಳ ಕೆಲಸವೇನೆಂದರೆ, ಸುಖಾಸುಮ್ಮನೆ ನಮ್ಮಂಥವರಿಗೆ ಫೋನ್ ಕರೆ ಮಾಡಿ, 'ನಿಮ್ಮ ಮೊಬೈಲ್ ನಂಬರ್ ನಮ್ಮ ಸ್ಪರ್ಧೆಯಲ್ಲಿ ಆಯ್ಕೆಯಾಗಿದೆ. ಅದರನುಸಾರ ನೀವು ಹೊರದೇಶದ ಟ್ರಿಪ್‌ಗೆ ಆಯ್ಕೆಯಾಗಿದ್ದೀರಿ. ನಿಮಗೊಂದು ಮೀಟ್ ಇಟ್ಟುಕೊಂಡಿದ್ದೇವೆ. ಜೊತೆಯಲ್ಲಿ ಬನ್ನಿ' ಎಂದು ಕರೆಯುತ್ತಾರೆ.

ಒಬ್ಬರೇ ಹೋದರೆ, ನಮ್ಮ ನಂಬರೆ ಕ್ಯಾನ್ಸಲ್. ಹಾಗೆಯೇ ಒಂಟಿ ಚಪ್ಪಲಿಯ ಸ್ಥಿತಿಯೂ. ಹಾಗಿದ್ದಾಗ, ಒಂದು ಚಪ್ಪಲಿ ಕಳೆದು ಹೋದರೆ ಮತ್ತೊಂದನ್ನು ಅಲ್ಲಿಯೇ ಬಿಟ್ಟು ಬರಿಗಾಲಿನಲ್ಲಿ ಮರಳಿ ಬರುವುದನ್ನು ಬಿಟ್ಟು ಬೇರೆ ಆಯ್ಕೆಯೇ ಇರುವುದಿಲ್ಲ. ಇಲ್ಲಿ ನಮ್ಮ ಓಣಿಯ ಕಲಾವತಿಯನ್ನು ನಾವೆಲ್ಲಾ ಆಗಾಗ ನೆನೆಯುತ್ತಿದ್ದೆವು. ಅದೇನೆಂದರೆ, ಅವಳ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಯಲ್ಲಿ ಹೊಂದಾಣಿಕೆ ಇರಲಿಲ್ಲಾ. ಓಣಿಯ ಎಲ್ಲರೂ ಕಲಾವತಿ 'ಮಬ್ಬು' ಎಂದು ಹೇಳುತ್ತಿದ್ದುದು ನನಗೀಗಲೂ ನೆನಪಿದೆ. ಹಾಗಾಗಿ, ಯಾವಾಗಲಾದ್ರು ಏನಾದ್ರು ಮಾತನಾಡಿಬಿಡೋಳು. ಒಂದಿನ ಅವಳು ತನ್ನ ತಾಯಿಯ ಜೊತೆ ಚಪ್ಪಲಿ ಅಂಗಡಿಗೆ ಹೋಗಿರುವಾಗ, ಚಪ್ಪಲಿಯನ್ನು ಆಯ್ಕೆ ಮಾಡಿ ರೇಟು ಎಷ್ಟೆಂದು ತಾಯಿ ಅಂಗಡಿಯಾತನ ಬಳಿ ಕೇಳಿದರಂತೆ. ಅಂಗಡಿಯವನು ಹೇಳಿದ ರೇಟು ಕೇಳಿದ ಆಕೆ, 'ಭಾಳ ದುಬಾರಿಯಾತು ಬಿಡ್ರಿ' ಎಂದರಂತೆ. ಅದಕ್ಕೆ ಸುಮ್ಮನಿರದ ಕಲಾವತಿ 'ಅವ್ವಾ ದುಬಾರಿ ಅನ್ನೊದಾದ್ರ ಎರಡು ಯಾಕ ತಗೋತಿ ಒಂದ ತಗೊಂಬಿಡು' ಎಂದಳಂತೆ. ಅವಳ 'ಮಬ್ಬುಜಾಣತನ'ವನ್ನು ಇಡೀ ಓಣಿಯ ತುಂಬಾ ಹೇಳಿ ಎಲ್ಲರೂ ನಕ್ಕಿದ್ದೇ ನಕ್ಕಿದ್ದು.

ಈ ಚಪ್ಪಲಿ ಪಾದರಕ್ಷಕ ಆಗಿರಬಹುದು. ಆದರೆ, ಅದು ನನ್ನನ್ನು ಮಂಗಭಯ ನಿವಾರಕಳನ್ನಾಗಿ ಮಾಡಿದ ಒಂದು ಘಟನೆಯಿಂದ, ನನಗೆ ಮಂಗಗಳೆಂದರೆ,